# ಮಳೆಯಲಿ ರೇನ್‌ಕೋಟ್ ಜತೆಯಲಿ



ಫ್ಯಾಷನ್ ಜಗತ್ತಿನ ಓಘದಲ್ಲಿ ಸುಮ್ಮನೇ ಒಂದು ರೇನ್‌ಕೋಟ್ ಧರಿಸಿದರೆ ಆಗುತ್ತದೆಯೇ? ಸಮಯ, ಸಂದರ್ಭ, ಭೇಟಿ ನೀಡುವ ಸ್ಥಳಕ್ಕೆ ಹೊಂದುವಂತಹ ರೇನ್‌ಕೋಟ್ ತೊಟ್ಟರೇನೆ ಚೆನ್ನ. ರೇನ್‌ಕೋಟ್‌ನಲ್ಲೂ ಟ್ರೆಂಡಿಯಾಗಿರಲು ಬಯಸುತ್ತದೆ ಯುವ ಮನ.

■ ಸುಮಾ ಬಿ.

ತೊಂಬತ್ತರ ದಶಕವದು... ಇನ್ನೇನು ಸಂಜೆಯ ಪ್ರಾರ್ಥನೆ ಮುಗಿಸಿ ಶಾಲೆಯ ಬೆಲ್ ಬಾರಿಸುತ್ತಿದ್ದಂತೆ 'ಧೋ...' ಎಂದು ಮಳೆ ಶುರುವಿಟ್ಟಿತು. ಕೊಠಡಿಯ ಕದದ (ಬಾಗಿಲು) ಮೂಲೆಯಲ್ಲಿ ಒಂದರ ಮೇಲೊಂದರಂತೆ ಪೇರಿಸಿಟ್ಟಿದ್ದ ಕೊಪ್ಪೆ ಚೀಲದತ್ತ ಓಡಿದ್ದಾಯಿತು. 'ನನ್ನದಿದು.. ನಿನ್ನದಿದು' ಎನ್ನುತ್ತ ಲಗುಬಗೆಯಲ್ಲೇ ತಡಕಾಡಿ ತಲೆ, ಪಾಟಿಚೀಲ, ಮೊಣಕಾಲುವರೆಗೆ ಮೈ ನೆನೆಯದಂತೆ ಹೊದ್ದು, ಚೀಲದ ಎರಡೂ ತುದಿಯನ್ನೂ ಗಟ್ಟಿಯಾಗಿ ಕೈಯಲ್ಲಿ ಹಿಡಿದು ಮನೆಯತ್ತ ಓಡಿದ್ದೇ ಓಡಿದ್ದು... ಬಿತ್ತನೆ ಕೆಲಸಕ್ಕಾಗಿ ತಂದ ರಸಗೊಬ್ಬರದ ಖಾಲಿ ಚೀಲಗಳೇ ಆಗ ರೇನ್ ಪ್ರೂಫ್ ಜಾಕೆಟ್ ಆಗಿದ್ದವು. ಸೆಣಬಿನ ಚೀಲಗಳು ಮಳೆ, ಶೀತಗಾಳಿಯಿಂದ ರಕ್ಷಿಸುವ ಕವಚಗಳಾಗಿದ್ದವು. ಈಗೇನಿದ್ದರೂ ರಂಗುರಂಗಿನ ರೇನ್‌ಕೋಟ್‌ಗಳ ಜಮಾನ.

ಮಕ್ಕಳೆಂದರೆ ಮಳೆಗೆ ಎಲ್ಲಿಲ್ಲದ ಪ್ರೀತಿ. ಆ ಕಾಲಕ್ಕೂ... ಈ ಕಾಲಕ್ಕೂ ಶಾಲೆ ಬಿಡುವಾಗಿನ ವೇಳೆಯಲ್ಲೇ ವರ್ಷೆ ಮಕ್ಕಳ ಕಲರವ ಕಣ್ತುಂಬಿಕೊಳ್ಳಲು ಇಳೆಯ ತಬ್ಬುತ್ತಾಳೆ. ತೊಯ್ಯುವುದನ್ನು ತಪ್ಪಿಸಲು ರೇನ್‌ಕೋಟ್‌ಗಳು ಮಕ್ಕಳ ಮೈ ಅಪ್ಪಿಕೊಳ್ಳುತ್ತವೆ. ಮುಡಿಯಿಂದ ಅಡಿವರೆಗೂ ಹನಿ ನೀರು ಸೋಕದಂತೆ ರೇನ್‌ಕೋಟ್‌ಗಳು ರಕ್ಷಾಕವಚವಾಗಿ ನಿಲ್ಲುತ್ತವೆ. ಹನಿಯುವ ಮಳೆಯಲ್ಲಿ ರಂಗುರಂಗಿನ ರೇನ್‌ಕೋಟ್ ಧರಿಸಿ ಶಾಲೆಯಿಂದ ಹೊರಬರುವ ಮಕ್ಕಳ ನೋಡುತ್ತಿದ್ದರೆ, ಗೊಬ್ಬರದ ಚೀಲ ಹೊದ್ದು ಮನೆಗೆ ಹೋಗುತ್ತಿದ್ದ ಆ ದಿನಗಳೇ ಸ್ಮೃತಿಪಟಲದಲ್ಲಿ ಸುಳಿಯುತ್ತವೆ. ಮೊಳಕಾಲುವರೆಗೆ ಮಾತ್ರವೇ ರಕ್ಷಣೆ ನೀಡುತ್ತಿದ್ದ ಚೀಲಗಳ ಕೆಳಗೆ ಪೂರ್ತಿ ಕೆಸರುಮಯವೇ. ಅಮ್ಮಂದಿರ ಬೈದಾಟ ತಪ್ಪುತ್ತಿರಲಿಲ್ಲ. ಈಗಿನ ಅಮ್ಮಂದಿರಿಗೆ ಆ ಗೋಜಲೇ ಇಲ್ಲ. ಒಂದು ರೇನ್‌ಕೋಟ್ ಕೊಂಡರೆ ಮಳೆ ನೀರ ತೊಯ್ಯುವಿಕೆಯಿಂದ ಮಕ್ಕಳನ್ನು, ತಮ್ಮನ್ನೂ